ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ

ಸಿ.ಸಿ.ನಂಃ**479/2023**

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಪೊಲೀಸ್ ಉಪ-ನಿರೀಕ್ಷಕರು,
ಮೂಡಬಿದ್ರೆ ಪೊಲೀಸ್ ಠಾಣೆ.

-ವಿರುದ್ಧ-

ಆರೋಪಿತರು ಃ

1) ಸುಧೀರ್ ಸುವರ್ಣ
ಪ್ರಾಯ 44 ವರ್ಷ,
ಬಿನ್ ದಿವಂಗತ ಶೇಖರ್ ಸುವರ್ಣ,
ವಾಸಃ ನೀರಪಲ್ಕೆ ಮನೆ,
ಒಂಟಿಕೆಟ್ಟೆ, ಪುತ್ತಿಗೆ ಗ್ರಾಮ,
ಮೂಡಬಿದ್ರೆ ತಾಲೂಕು.

2) ಶಂಕರ್ ಪೂಜಾರಿ
ಪ್ರಾಯ 44 ವರ್ಷ,
ಬಿನ್ ದಿವಂಗತ ಚಿನ್ನಯ್ಯ ಸುವರ್ಣ,
ವಾಸಃ ಕುಕ್ಕುದಡಿ ಮನೆ,
ಪಾಲಡ್ಕ ಗ್ರಾಮ, ಮೂಡಬಿದ್ರೆ ತಾಲೂಕು.

3) ಕಿಶೋರ್ ಪೂಜಾರಿ
ಪ್ರಾಯ 23 ವರ್ಷ,
ಬಿನ್ ಕೃಷ್ಣ,
ವಾಸಃ ಶ್ರೀ ಮಾತೃಕೃಪಾ,
ಹಿರ್ದುಗುಡ್ಡೆ ಮನೆ, ಧರೆಗುಡ್ಡೆ ಅಂಚೆ,
ಕಲ್ಲಪುತ್ತಿಗೆ ಗ್ರಾಮ, ಮೂಡಬಿದ್ರೆ ತಾಲೂಕು.

4) ವಿಶಾಲ್ ಪೂಜಾರಿ
ಪ್ರಾಯ 22 ವರ್ಷ,
ಬಿನ್ ಕೃಷ್ಣ ಪೂಜಾರಿ,
ವಾಸಃ ಶ್ರೀ ಮಾತೃಕೃಪಾ,
ಹಿರ್ದುಗುಡ್ಡೆ ಮನೆ, ಧರೆಗುಡ್ಡೆ ಅಂಚೆ,
ಕಲ್ಲಪುತ್ತಿಗೆ ಗ್ರಾಮ, ಮೂಡಬಿದ್ರೆ ತಾಲೂಕು.

5) ಸತೀಶ್ ಪೂಜಾರಿ
ಪ್ರಾಯ 38 ವರ್ಷ,
ಬಿನ್ ಸುಧಾಕರ ಪೂಜಾರಿ,
ವಾಸಃ ಸಾಂತ್ ಪಾಲ್ ಮನೆ,
ಪಾಲಡ್ಕ ಗ್ರಾಮ, ಮೂಡಬಿದ್ರೆ ತಾಲೂಕು.

6) ಸುಂದರ ಪೂಜಾರಿ
ಪ್ರಾಯ 45 ವರ್ಷ,
ಬಿನ್ ದಿವಂಗತ ಕರಿಯ ಪೂಜಾರಿ,
ವಾಸಃ ಕುಕ್ಕುದಡಿ ಮನೆ,
ಪಾಲಡ್ಕ ಗ್ರಾಮ, ಮೂಡಬಿದ್ರೆ ತಾಲೂಕು.

7) ರಾಘವೇಂದ್ರ ಭಟ್
ಪ್ರಾಯ 50 ವರ್ಷ,
ಬಿನ್ ದಿವಂಗತ ಕೃಷ್ಣ ಭಟ್,
ವಾಸಃ ಪಾಲಡ್ಕ ಚರ್ಚ್ ಬಳಿ,
ಪಾಲಡ್ಕ ಗ್ರಾಮ, ಮೂಡಬಿದ್ರೆ ತಾಲೂಕು.

8) ಮ್ಯಾಕ್ಸಿಂ ಲೋಬೊ
ಪ್ರಾಯ 50 ವರ್ಷ,
ಬಿನ್ ಇಗ್ನೇಷಿಯಸ್ ಲೋಬೊ,
ವಾಸಃ ಗುಂಡ್ಯಡ್ಕ ಮನೆ,
ಪಾಲಡ್ಕ ಗ್ರಾಮ, ಮೂಡಬಿದ್ರೆ ತಾಲೂಕು.

9) ಸೋಮನಾಥ ಪೂಜಾರಿ
ಪ್ರಾಯ 45 ವರ್ಷ,
ಬಿನ್ ಸೇಸಪ್ಪ ಅಂಚನ್,
ವಾಸಃ ಪೆರೋದು ಮನೆ,
ಸುಂಕದ ಕರಿಯ, ಮುಂಡ್ಕೂರು ಗ್ರಾಮ,
ಕಾರ್ಕಳ ತಾಲೂಕು.

10) ಚಂದನ್ ಪೂಜಾರಿ
ಪ್ರಾಯ 19 ವರ್ಷ,
ಬಿನ್ ಹರೀಶ್ ಪೂಜಾರಿ,
ವಾಸಃ ಪೆರೋದು ಮನೆ,
ಸುಂಕದ ಕರಿಯ, ಮುಂಡ್ಕೂರು ಗ್ರಾಮ,
ಕಾರ್ಕಳ ತಾಲೂಕು.

## ಃ ದೋಷಾರೋಪಣೆಃ

ಶ್ರೀ ಕಾವೇರಮ್ಮ ಎಂ., ಬಿ.ಎ., ಎಲ್.ಎಲ್.ಬಿ, ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ., ಮೂಡಬಿದ್ರೆ ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ 03-07-2022 ರಂದು ಸಂಜೆ 5.00 ರಿಂದ ಸಂಜೆ 6.30 ಗಂಟೆಯ ಮಧ್ಯ ಸಮಯದಲ್ಲಿ ಮೂಡಬಿದ್ರೆ ಠಾಣಾ ವ್ಯಾಪ್ತಿಯ ಮೂಡಬಿದ್ರೆ ತಾಲೂಕು, ಪಾಲಡ್ಕ ಗ್ರಾಮದ ಬಾಕ್ಯಾರುಗದ್ದೆ ಎಂಬಲ್ಲಿ ನೀವುಗಳು ತಕ್ಷೀರು ಮಾಡುವ ಸಮಾನ ಉದ್ದೇಶದಿಂದ ಅಕ್ರಮ ಕೂಟ ಸೇರಿರುತ್ತೀರಿ. ಆದ್ದರಿಂದ, ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ನೀವು ಅಕ್ರಮ ಕೂಟ ಸೇರಿಕೊಂಡು ದೊಂಬಿ ನಡೆಸಿರುತ್ತೀರಿ. ಆದ್ದರಿಂದ, ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೂರನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಚಾಸಾ-1 ಶ್ರೀಮತಿ ಚೆನ್ನಮ್ಮ ಪೂಜಾರ್ತಿ ರವರಿಗೆ ಸೇರಿದ ಗದ್ದೆಯನ್ನು ಚಾಸಾ-6 ಬಸವರಾಜ ನಂದಿ ರವರು ಟ್ರಾಕ್ಟರ್ ನಲ್ಲಿ ಉಳುಮೆ ಮಾಡುವ ಸ್ಥಳಕ್ಕೆ ಬಂದು ಬಾಕ್ಯಾರು ಗದ್ದೆಯಿಂದ ಚಾಸಾ-1 ರವರ ಮನೆಯ ಹತ್ತಿರವಿರುವ ಇವರ ಇನ್ನೊಂದು ಗದ್ದೆಗೆ ನಾಗಬನ ಮತ್ತು ರಕ್ತೇಶ್ವರಿ ಬನದ ಹತ್ತಿರ ಹಾದುಹೋಗುವ ದಾರಿಯನ್ನು ನೀವು ಕೆಂಪು ಕಲ್ಲುಗಳನ್ನು ಅಡ್ಡವಾಗಿ ಇಟ್ಟು ಗದ್ದೆಯ ಹುಣಿಯನ್ನು ಅಗೆದು ಸಪೂರ ಮಾಡಿ ಟ್ರಾಕ್ಟರ್ ಹೋಗದಂತೆ ತಡೆಯೊಡ್ಡಿರುತ್ತೀರಿ. ಆದ್ದರಿಂದ, ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ನಾಲ್ಕನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ನೇ ಆರೋಪಿಯು ಚಾಸಾ-1 ರವರನ್ನು ಉದ್ದೇಶಿಸಿ "ರಂಡೆ, ಮುಂಡೆ, ಬೇವರ್ಸಿ, ಸೂಳೆ" ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತೀರಿ ಹಾಗೂ 3 ರಿಂದ 6 ಮತ್ತು 9 ನೇ ಆರೋಪಿಗಳು ಚಾಸಾ-1 ಮತ್ತು ಚಾಸಾ-4 ರವರನ್ನು ಉದ್ದೇಶಿಸಿ "ನಿಮಗೆ ಬಾರಿ ಅಹಂಕಾರ ಇದೆ" ಎಂಬುದಾಗಿ ಬೈದಿರುತ್ತೀರಿ. ಆದ್ದರಿಂದ, ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಐದನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ನೇ ಆರೋಪಿ ಪ್ಯಾಂಟಿನ ಜಿಪ್ ನ್ನು ಜಾರಿಸಿ ಅಶ್ಲೀಲವಾಗಿ ಗುಪ್ತಾಂಗವನ್ನು ತೋರಿಸಿರುತ್ತೀರಿ. ಆದ್ದರಿಂದ, ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 354(ಎ)(iv) ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 2 ನೇ ಆರೋಪಿಯು ಚಾಸಾ-1 ರವರನ್ನು ಉದ್ದೇಶಿಸಿ "ನಿನ್ನನ್ನು ಕೊಲ್ಲದೆ ಬಿಡುವುದಿಲ್ಲ ಸೂಳೆ" ಹಾಗೂ ಚಾಸಾ-1 ಮತ್ತು ಚಾಸಾ-4 ರವರನ್ನು ಉದ್ದೇಶಿಸಿ "ಕತ್ತಿ ಕನಲೆ ಕತ್ತಿ ಕನಲೆ ಮೊಕ್ಲೆನ್ ಪರಬೆರೆನ್ ಕಡ್ತ್ ಪಾಡ್ಲೆ" ಎಂಬುದಾಗಿ ಜೀವ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ, ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ನಿಮ್ಮ ಮೇಲಿನ ಆರೋಪಗಳ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

ಸಹಿ/-

ದಿನಾಂಕಃ 10-10-2024

**(ಕಾವೇರಮ್ಮ ಎಂ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ